# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1155 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 21.08.2025 |
| 4. | ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರಮ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸಿಂಧನೂರು ತಾಲ್ಲೂಕಿನಾದ್ಯಂತ ಅಕ್ರಮವಾಗಿ ಡ್ರಗ್ಸ್ ಮರಳು ಮತ್ತು ಗಾಂಜಾ ಮಾರಾಟ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಾದ್ಯಂತ ಅಕ್ರಮವಾಗಿ ಡ್ರಗ್ಸ್, ಮರಳು ಮತ್ತು ಗಾಂಜಾ ಮಾರಾಟ ಪ್ರಕರಣಗಳ ಮಾಹಿತಿ ಈ ಕೆಳಗಿನಂತಿದೆ:-
<table>
<tr><th>ವರ್ಷ</th><th>ಡ್ರಗ್ಸ್ ಪ್ರಕರಣ ಸಂಖ್ಯೆ</th><th>ಅಕ್ರಮ ಮರಳು ಪ್ರಕರಣ ಸಂಖ್ಯೆ</th><th>ಗಾಂಜಾ ಪ್ರಕರಣ ಸಂಖ್ಯೆ</th></tr>
<tr><td>2023</td><td>0</td><td>77</td><td>04</td></tr>
<tr><td>2024</td><td>0</td><td>60</td><td>08</td></tr>
<tr><td>2025</td><td>0</td><td>60</td><td>07</td></tr>
<tr><td>ಒಟ್ಟು</td><td>0</td><td>197</td><td>19</td></tr>
</table>
</td></tr>
<tr><td>(ಆ)</td><td>ಬಂದಿದಲ್ಲಿ, ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?</td><td>ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಕೈಗೊಳ್ಳಲಾದ ಮಾಹಿತಿ ಕೆಳಗಿನಂತಿದೆ:-<br><br>
➢ ರಾಯಚೂರು ಜಿಲ್ಲೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ಬಂದಲ್ಲಿ ದಾಳಿ ಮಾಡಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.<br><br>
➢ ಸಿಂಧನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಈ ರೀತಿ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದನ್ನು ಆಧರಿಸಿ ದಾಳಿ ಮಾಡಿ ಗಾಂಜಾ ಜಪ್ತಿ ಮಾಡಿ, ಪ್ರಕರಣಗಳನ್ನು ದಾಖಲಿಸಿಕೊಂಡು ಆರೋಪಿತರನ್ನು ದಸ್ತಗಿರಿ ಕ್ರಮಕ್ಕೆ ಒಳಪಡಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ.<br><br>
➢ ಸಂಶಯಾಸ್ಪದ ಗಾಂಜಾ ಮಾರುವಂತಹ ಮತ್ತು ಗಾಂಜಾ ಸೇವನೆ ಮಾಡುವಂತಹ ವ್ಯಕ್ತಿಗಳ ಮೇಲೆ ನಿರಂತರವಾಗಿ ನಿಗಾವಣೆ ಇಟ್ಟು ಪರಿಶೀಲಿಸಲಾಗುತ್ತಿದೆ.<br><br>
➢ ಈಗಾಗಲೇ ಗಾಂಜಾ ಪ್ರಕರಣದಲ್ಲಿ ಭಾಗಿಯಾದ ಕೆಲವು ವ್ಯಕ್ತಿಗಳ ಮೇಲೆ ರೌಡಿ ಹಾಳೆ ತೆರೆದು ಕಟ್ಟುನಿಟ್ಟಿನ ನಿಗಾವಣೆ ಇಡಲಾಗಿದೆ.<br><br>
➢ ಕಾಲ ಕಾಲಕ್ಕೆ ಠಾಣಾ ವ್ಯಾಪ್ತಿಗಳಲ್ಲಿ ಬಹಳಷ್ಟು ಕಡೆ ಜನಸಂಪರ್ಕ ಸಭೆ, ಶಾಲಾ-ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಾಕ್ರಮ ಹಮ್ಮಿಕೊಂಡು ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ವ್ಯಸನದಿಂದ ಉಂಟಾಗುವ ದುಷ್ಪರಿಣಾಮಗಳಿಂದ ದೂರವಿರುವಂತೆ ಮತ್ತು ಮಾಹಿತಿ ನೀಡುವಂತೆ ತಿಳುವಳಿಕೆ ನೀಡಲಾಗಿರುತ್ತದೆ.<br><br>
➢ ಮದ್ಯ ವ್ಯಸನ ನಿರ್ಮೂಲನೆ ಕುರಿತು ಸಿಂಧನೂರು ನಗರದ ಎಂ.ಜಿ</td></tr>
</table>

| | | |
|---|---|---|
| | | ವೃತ್ತದಿಂದ ಕುಷ್ಟಗಿ ರಸ್ತೆಯ ಸರ್ಕ್ಯೂಟ್ ಹೌಸ್‌ವರೆಗೆ ವೈದ್ಯರ ತಂಡ, ಸರ್ಕಾರಿ ನೌಕರರು, ಸಂಘ ಸಂಸ್ಥೆಗಳು, ಮತ್ತು ವಿದ್ಯಾರ್ಥಿಗಳೊಂದಿಗೆ ಜಾಥಾ ಮಾಡಿ ಅರಿವು ಮೂಡಿಸುವ ಕಾರ್ಯಾಕ್ರಮವನ್ನು ಮಾಡಲಾಗಿರುತ್ತದೆ.<br><br>➢ ವಿದ್ಯಾರ್ಥಿಗಳಿಗೆ ವೈದ್ಯರ, ತಹಶೀಲ್ದಾರರ ಮೂಲಕ ಮದ್ಯ ವ್ಯಸನದ ನಿರ್ಮೂಲನೆ ಕುರಿತು ಅರಿವು ಮೂಡಿಸಲಾಗಿರುತ್ತದೆ, ಅಲ್ಲದೇ ವಿಜಯ ಕರ್ನಾಟಕ ಪತ್ರಿಕೆಯ ಪದಾಧಿಕಾರಿಗಳ ಸಹಯೋಗದೊಂದಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಿಂಧನೂರು ನಗರದಲ್ಲಿ ವಿವಿಧ ಬ್ಯಾನರ್ ಗಳೊಂದಿಗೆ ಜಾಥಾ ನಡೆಸಿ ಅರಿವು ಮೂಡಿಸಲಾಗಿರುತ್ತದೆ.<br><br>➢ ಇತರೆ ಇಲಾಖೆಗಳೊಂದಿಗೆ ಸಮನ್ವಯತೆ ಮಾಡಿಕೊಂಡು ಅವರ ಸಹಕಾರ ಪಡೆದು ಗಾಂಜಾ ಸಾಗುವಳಿ, ಗಾಂಜಾ ಮಾರಾಟ, ಸಾಗಾಣಿಕೆ ಮತ್ತು ಗಾಂಜಾ ಸೇವನೆ ಬಗ್ಗೆ ತಳಮಟ್ಟದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಠಾಣೆಗಳಿಗೆ ಭೇಟಿ ನೀಡುವ ಮುಖಂಡರುಗಳಿಗೆ ಮತ್ತು ಸಾರ್ವಜನಿಕರಿಗೆ ಈ ಕುರಿತು ಗುಪ್ತ ಮಾಹಿತಿ ನೀಡುವಂತೆ ತಿಳಿಸಲಾಗುತ್ತಿದೆ.<br><br>➢ ಬೀಟ್ ಸಿಬ್ಬಂದಿಗಳಿಗೆ ಅವರವರ ಠಾಣಾ ವ್ಯಾಪ್ತಿಯಲ್ಲಿ ಮಾಹಿತಿ ಸಂಗ್ರಹಿಸಿ, ದಾಳಿ ಮಾಡಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>➢ ಡ್ರಗ್ಸ್ ಪ್ರಕರಣಗಳು ತಾಲ್ಲೂಕಿನ ವ್ಯಾಪ್ತಿಯಲ್ಲಿ ಈವರಗೆ ಕಂಡು ಬಂದಿರುವುದಿಲ್ಲ, ಈ ಕುರಿತಂತೆ ಮಾಹಿತಿ ಪಡೆಯಲು ಮತ್ತು ನೀಡಲು ಸಾರ್ವಜನಿಕರಿಗೆ, ಬಾತ್ಮೀದಾರರಿಗೆ ಮತ್ತು ಬೀಟ್ ಸಿಬ್ಬಂದಿಗಳಿಗೆ ತಿಳಿಸಲಾಗಿರುತ್ತದೆ.<br><br>➢ ಆಗಾಗ್ಗೆ ಮೆಡಿಕಲ್ ಶಾಪ್‌ಗಳ ಮೇಲೆ ಮತ್ತು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಅಲ್ಲದೇ ಜಿಲ್ಲಾಡಳಿತದ ವತಿಯಿಂದಲೂ ಡ್ರಗ್ಸ್ ಕಂಟ್ರೋಲ್ ಬೋರ್ಡ್‌ನ ಅಧಿಕಾರಿಗಳು ಕೆಲವು ಮೆಡಿಕಲ್ ಶಾಪ್‌ಗಳನ್ನು ಪರಿಶೀಲನೆ ಮಾಡಿರುತ್ತದೆ. ಅಲ್ಲದೇ ಮೆಡಿಕಲ್ ಶಾಪ್‌ಗಳ ಮಾಲಿಕರನ್ನು ಕರೆದು ಸೂಚನೆಗಳನ್ನು ನೀಡಲಾಗಿದೆ.<br><br>➢ ಗಾಂಜಾ ಸೇವಿಸಿದವರ ಪತ್ತೆ ಕುರಿತು ಗಾಂಜಾ ಸೇವನೆ ಪರಿಶೀಲನಾ ಕಿಟ್‌ಗಳನ್ನು ಪ್ರತೇಕವಾಗಿ ತರಿಸಿ, ಗಾಂಜಾ ಸೇವಿಸಿದವರ ಮೂತ್ರ ಪರೀಕ್ಷೆ ಮಾಡಿಸಿ, ಸೇವನೆ ಕಂಡು ಬಂದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿರುತ್ತದೆ.<br><br>➢ ಅಕ್ರಮ ಮರಳು ಸಾಗಾಟಕ್ಕೆ ಸಂಬಂಧಿಸಿದಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ.<br><br>➢ ಸಿಂಧನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೂರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಿಗೆ ಪಡೆದ ಸ್ಟ್ಯಾಕ್ ಯಾರ್ಡ್ ಗಳಿದ್ದು, ಇದರಿಂದ ರಾಯಲ್ಟಿ ಪಡೆದು ಮರಳು ಸಾಗಾಟ ನಡೆಯುತ್ತಿದ್ದು, ಆದಾಗ್ಯೂ ಇದನ್ನು ತಪ್ಪಿಸಿ ಅಕ್ರಮ ಸಾಗಾಟ ಮಾಡಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>➢ ಅಕ್ರಮ ಮರಳು ಸಂಗ್ರಹದ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಮಾಹಿತಿ ನೀಡಿ ದಾಳಿ ಮಾಡಿಸಲಾಗುತ್ತದೆ. ಹೆಚ್ಚುವರಿ ತೂಕ ಸಾಗಾಟ ಮಾಡುವವರ ವಿರುದ್ಧವು ಕ್ರಮ |

| | | |
|---|---|---|
| | | ಕೈಗೊಂಡು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ದಂಡ ವಿಧಿಸಲಾಗಿರುತ್ತದೆ.<br><br>➤ ಅರಣ್ಯ, ಕಂದಾಯ, ಲೋಕೋಪಯೋಗಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಇತರೆ ಇಲಾಖೆಗಳಿಗೆ ಅಗತ್ಯ ಸಹಕಾರವನ್ನು ಒದಗಿಸಿ ಯಾವುದೇ ಅಕ್ರಮ ಮರಳು ಸಾಗಾಣಿಕೆ ನಡೆಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>➤ ಸಕ್ಷಮ ಪ್ರಾಧಿಕಾರ ಅನುಮತಿ ಪಡೆದು ಮರಳು ಸಾಗಿಸುವ ವಾಹನಗಳನ್ನು ನಿಯಮಿತವಾಗಿ ತಪಾಸಣೆ ಮಾಡಿ, ನಕಲಿ ಪರ್ಮಿಟ್‌ಗಳನ್ನು ಪಡೆದು ಮರಳನ್ನು ಸಾಗಿಸುವ ವಾಹನಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳುವ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯೊಂದಿಗೆ ನೈಜತೆಯ ಕುರಿತು ಮಾಹಿತಿ ಪಡೆಯಲಾಗುತ್ತಿದೆ ಮತ್ತು ಅವರಿಗೂ ಕೂಡ ಈ ಕುರಿತು ತಪಾಸಣೆ ಮಾಡುವಂತೆ ಕೋರಲಾಗಿದೆ.<br><br>➤ ಚೆಕ್‌ಪೋಸ್ಟ್‌ಗಳಲ್ಲಿ ನಿರಂತರವಾಗಿ ಸಿಬ್ಬಂದಿಗಳನ್ನು ನೇಮಿಸಿ ವಾಹನಗಳನ್ನು ತಪಾಸಣೆ ಮಾಡಿ ಮರಳು ಸಾಗಾಣಿಕೆಯಾಗುತ್ತಿದ್ದು ಕಂಡು ಬಂದಲ್ಲಿ ಕೂಡಲೇ ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br><br>➤ ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾಡಳಿತವು ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟುಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನೊಳಗೊಂಡ ಸ್ಯಾಂಡ್ ಟಾಸ್ಕ್ ಫೋರ್ಸ್‌ನ್ನು ರಚಿಸಲಾಗಿದ್ದು, ಅಲ್ಲದೇ, ಅಕ್ರಮ ಮರಳು ಸಾಗಾಣಿಕೆ ನಡೆಯುವ ತಾಲ್ಲೂಕುಗಳಲ್ಲಿ ಮರಳು ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. |

ಒಇ 51 ಪಿಎನ್‌ಡಿ 2025 (ಇ)

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು